ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಮ್. ಎಫ್.ಸಿ. ನ್ಯಾಯಾಲಯ, ಬೇಲೂರು

---

**ಸಿ.ಸಿ. ನಂ. 385/2020**

**ಸಾಕ್ಷಿ: ಸಿ.ಡಬ್ಲ್ಯೂ:5 ಪಿ.ಡಬ್ಲ್ಯೂ: 4**

ಸಾಕ್ಷಿದಾರನ ಹೆಸರು : ಎಂ ಕೆ ಕೇಶವಮೂರ್ತಿ

ತಂದೆಯ ಹೆಸರು : ಕೃಷ್ಣಮೂರ್ತಿ

ವಯಸ್ಸು : 52 ವರ್ಷ

ಉದ್ಯೋಗ : ಅಬಕಾರಿ ನಿರೀಕ್ಷಕರು, ಹಾಸನ ವಲಯ

ವಾಸಸ್ಥಳ : ಹಾಸನ

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾ: 20-02-2026**

**ಮುಖ್ಯ ವಿಚಾರಣೆ:** ಎಪಿಪಿಯವರಿಂದ,

**ನಾನು** ದಿ:**22-10-2018 ರಿಂದ 05-03-2021** ರವರೆಗೆ ಬೇಲೂರು ವಲಯದಲ್ಲಿ ಅಬಕಾರಿ ನಿರೀಕ್ಷಕನಾಗಿ **ಕರ್ತವ್ಯ** ನಿರ್ವಹಿಸಿರುತ್ತೇನೆ.

ದಿ: 17-04-2020 ರಂದು ನಾನು ಮತ್ತು ಚಾಸಾ-3 ಮತ್ತು 4 ರವರು ಚಿಕ್ಕಮ್ಮನಹಳ್ಳಿ ಗ್ರಾಮದಲ್ಲಿ ಗಸ್ತು ಕರ್ತವ್ಯ ನಿರ್ವಹಿಸುತ್ತಿದ್ದಾಗ ಕ್ಯಾತಲಾಪುರ ಗ್ರಾಮದ ಕೇಶವಯ್ಯ ಬಿನ್ ರಂಗಯ್ಯ ಎಂಬುವರು ಅಕ್ರಮವಾಗಿ ಕಳ್ಳಭಟ್ಟಿ ತಯಾರಿಸಿ ಮಾರಾಟ ಮಾಡುವ ಸಲುವಾಗಿ ದಾಸ್ತಾನು ಮಾಡಿರುವುದಾಗಿ ಮಾಹಿತಿ ಬಂದಿರುತ್ತದೆ. ನಂತರ ನಾನು ಮತ್ತು ನನ್ನ ಸಿಬ್ಬಂದಿಯವರು ಬೇಲೂರು ಹಾಸನ ರಸ್ತೆಯಲ್ಲಿರುವ ಕ್ಯಾತಲಾಪುರ ಗ್ರಾಮಕ್ಕೆ ಹೋಗುವ ತಿರುವಿನಲ್ಲಿ ಚಾಸಾ-1 ಮತ್ತು 2 ರವರಿಗೆ ಮಾಹಿತಿಯನ್ನು ತಿಳಿಸಿ ನೋಟೀಸ್ ಕೊಟ್ಟು ಅವರನ್ನು ನಮ್ಮಜೊತೆ ಕರೆದುಕೊಂಡು ಆರೋಪಿಯ ಮನೆ ಹತ್ತಿರ ಹೋಗಿರುತ್ತೇವೆ. ಮನೆ ಬಾಗಿಲು ತೆರೆದಿದ್ದು, ಮನೆಯಲ್ಲಿ ಇದ್ದವರನ್ನು ಕೂಗಿ ಕರೆದಾಗ ಒಬ್ಬ ವ್ಯಕ್ತಿ ಹೊರ ಬಂದಿದ್ದು ಅವರಿಗೆ ಬಂದ ವಿಷಯ ತಿಳಿಸಿ ಮನೆಯನ್ನು ಶೋಧಿಸಲು ಕಾಲಾವಕಾಶ ಇಲ್ಲದ ಕಾರಣ ಅಬಕಾರಿ ಕಾಯ್ದೆ ಕಲಂ 54 ರಡಿ ಶೋಧನಾ ವಾರೆಂಟನ್ನು ತಯಾರಿಸಿಕೊಂಡು ಮನೆಯನ್ನು ಶೋಧಿಸಿದಾಗ 2 ಲೀ ಸಮರ್ಥ್ಯದ ಪ್ಲಾಸ್ಟಿಕ್ ಬಾಟಲಿಯಲ್ಲಿ 2 ಲೀ ಕಳ್ಳಭಟ್ಟಿ ಸಾರಾಯಿ, 15 ಲೀ ಸಾಮರ್ಥ್ಯದ ಪ್ಲಾಸ್ಟಿಕ್ ಕೊಡದಲ್ಲಿ 15 ಲೀ ಬೆಲ್ಲದ ಕೊಳೆ ಇರುವುದು ಕಂಡುಬಂದಿರುತ್ತದೆ. ದೊರೆತ ಸ್ವತ್ತುಗಳಿಂದ ತಲಾ 500 ಮಿಲಿಯಷ್ಟು ಕಳ್ಳಭಟ್ಟಿ ಸಾರಾಯಿ ಮತ್ತು ಬೆಲ್ಲದ

ಕೊಳೆಯನ್ನು ರಾಸಾಯನಿಕ ಪರೀಕ್ಷೆಗೆ ತೆಗೆದು ಅವುಗಳಿಗೆ ದಾರ ಸುತ್ತಿ ಬಟ್ಟೆ ಕಟ್ಟಿ ಇಲಾಖಾ ಸೀಲಿನಿಂದ ಮೊಹರು ಮಾಡಲಾಯಿತು. ಮಹಜರನ್ನು ಮಧ್ಯಾಹ್ನ 12.30 ರಿಂದ 1.30 ರವರೆಗೆ ತಯಾರಿಸಲಾಯಿತು. ಮುದ್ದೆ ಮಾಲು ಮತ್ತು ಆರೋಪಿಯೊಂದಿಗೆ ಕಛೇರಿಗೆ ಬಂದು ಆರೋಪಿಯ ವಿರುದ್ಧ ಪ್ರವವ ವನ್ನು ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಳ್ಳಲಾಯಿತು.

ತನಿಖೆ ಮುಂದುವರೆಸಿ ದಿಃ 22-05-2020 ರಂದು ಯಲಹಂಕ ಪಿ ಡಿ ಓ ರವರಿಗೆ ಮನೆಯ ಮಾಲೀಕತ್ವದ ವಿವರ ಕೋರಿ ಪತ್ರ ಬರೆದಿರುತ್ತೇನೆ. ದಿಃ 22-05-2020 ರಂದು ಚಾಸಾ-4 ರವರ ಮೂಲಕ ಮಾದರಿಯನ್ನು ರಾಸಾಯನಿಕ ವಿಶ್ಲೇಷಣೆಗೆ ಕಳುಹಿಸಿಕೊಟ್ಟಿರುತ್ತೇನೆ. ರಾಸಾಯನಿಕ ವರದಿಯನ್ನು ದಿಃ 08-07-2020 ರಂದು ತಂದುಕೊಟ್ಟಿದ್ದು ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಕಡತ ಮತ್ತು ಸ್ವತ್ತುಗಳನ್ನು ಮುಂದಿನ ತನಿಖೆಗಾಗಿ ಚಾಸಾ-6 ರವರಿಗೆ ಹಸ್ತಾಂತರಿಸಿರುತ್ತೇನೆ.

ಸಾಕ್ಷಿ ನಿಪಿ-1 ಮತ್ತು 2 ರಲ್ಲಿರುವ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-1ಡಿ , 2ಸಿ ಎಂದು ಗುರುತಿಸಲಾಯಿತು. ಸಾಕ್ಷಿ ಗುರುತಿಸಿದ ಶೋಧನಾ ವಾರೆಂಟನ್ನು ನಿಪಿ-3, ಸಾಕ್ಷಿ ಸಹಿ ನಿಪಿ-3ಎ, ಪ್ರವವ ನಿಪಿ-4, ಸಾಕ್ಷಿ ಸಹಿ ನಿಪಿ- 4ಎ, ಪಿಡಿಓ ರವರಿಗೆ ಬರೆದ ಪತ್ರ ನಿಪಿ-5, ಸಾಕ್ಷಿ ಸಹಿ ನಿಪಿ-5ಎ, ರಾಸಾಯನಿಕ ವಿಶ್ಲೇಷಕರಿಗೆ ಬರೆದ ಪತ್ರ ನಿಪಿ-6, ಸಹಿ ನಿಪಿ-6ಎ, ರಾಸಾಯನಿಕ ವರದಿ ನಿಪಿ-7, ಸಾಕ್ಷಿ ಸಹಿ ನಿಪಿ-7ಎ , ರಾಸಾಯನಿಕ ಪರೀಕ್ಷೆಗೆ ಮಾದರಿ ತೆಗೆದ ಎರಡು ಬಾಟಲುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮುಮಾ-1 ಮತ್ತು 2 ಎಂದು ಗುರುತಿಸಲಾಗಿದೆ. ಸಾಕ್ಷಿ ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ ಟಿ ಪಿ ವಕೀಲರಿಂದ**

ದಿಃ 17-04-2020 ರಂದು ಕೊರೋನಾ ಲಾಕ್ ಡೌನ್ ಇತ್ತು ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ 2-3 ಜನರು ಒಟ್ಟಿಗೆ ಸೇರಲು ನಿರ್ಬಂಧ ಇತ್ತು ಎಂದರೆ ಸರಿಯಲ್ಲ. ದಿಃ 27-03-2020 ರಿಂದ ಕೊರೋನಾ ಲಾಕ್ ಡೌನ್ ಜಾರಿಯಲ್ಲಿತ್ತು ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ. ಕ್ಯಾತಲಾಪುರಕ್ಕೆ ಹೋಗುವ ತಿರುವಿನಲ್ಲಿ ಪಂಚರು ಸಿಕ್ಕಿರುತ್ತಾರೆ.

ಅಲ್ಲೇ ಇದ್ದ ಆರೋಪಿ ಮನೆ 4-5 ಕಿ ಮೀ ಆಗುತ್ತದೆ. ಆರೋಪಿಯ ಮನೆಯನ್ನು ಮಾಹಿತಿದಾರರು ಮೊದಲೇ ತಿಳಿಸಿದ್ದರು. ನಮ್ಮ ಸಿಬ್ಬಂದಿಯವರು ಆರೋಪಿಯ ಮನೆಯನ್ನು ನೋಡಿದ್ದರು. ಪಂಚರು 12.15 ಕ್ಕೆ ಸಿಕ್ಕಿರುತ್ತಾರೆ. ಆರೋಪಿ ಮನೆಗೆ ಹೋಗಲು 5 ನಿಮಿಷ ಸಾಕಾಗುತ್ತದೆ. ಆರೋಪಿ ಮನೆಯಲ್ಲಿ ಆರೋಪಿ ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ಮನೆಯ ಹತ್ತಿರ ಹೋದಾಗ ಸಮಯ 12.20 ಆಗಿತ್ತು. ಶೋಧನಾ ವಾರೆಂಟ್ ತಯಾರಿಸಿ ಮುದ್ದೆಮಾಲುಗಳನ್ನು ವಶಪಡಿಸಿಕೊಳ್ಳಲು 10 ನಿಮಿಷ ಆಗಿರುತ್ತದೆ. ನಮ್ಮ ಸಿಬ್ಬಂದಿಗಳೇ ಮನೆಯನ್ನು ಶೋಧನೆ ಮಾಡಿರುತ್ತಾರೆ. ಮಹಜರ್ ನಲ್ಲಿ ದೊರೆತ ವಸ್ತುಗಳು ಕಳ್ಳಭಟ್ಟಿ ಸಾರಾಯಿ ಮತ್ತು ಬೆಲ್ಲದ ಕೊಳೆ ಎಂದು ನಿಖರವಾಗಿ ಹೇಳಲು ಯಾವುದೇ ಮಾರ್ಗ ಸೂಚಿ ಅನುಸರಿಸಿರುವುದಿಲ್ಲ. ಮಾದರಿ ತೆಗೆದ ಬಾಟಲ್ ಗಳನ್ನು ನಮ್ಮ ಕಾರ್ ನಲ್ಲಿ ತೆಗೆದುಕೊಂಡು ಹೋಗಿರುತ್ತೇವೆ. ಆ ಬಗ್ಗೆ ಮಹಜರ್ ನಲ್ಲಿ ಬರೆದಿರುವುದಿಲ್ಲ. ನಿಖರವಾಗಿ ಎಷ್ಟು ಗಂಟೆಯಲ್ಲಿ ಮಾದರಿಯನ್ನು ಸಂಗ್ರಹಿಸಿರುತ್ತೇವೆ ಎಂದು ನೆನಪಿಲ್ಲ. ಬೆಲ್ಲದ ಕೊಳೆಯನ್ನು ಸಂಗ್ರಹಿಸಿಟ್ಟ ಬಗ್ಗೆ ಯಾವುದೇ ಛಾಯಾಚಿತ್ರ ತೆಗೆದಿರುವುದಿಲ್ಲ. ದೊರೆತ ಕಳ್ಳಭಟ್ಟಿ ಮತ್ತು ಬೆಲ್ಲದಕೊಳೆಯನ್ನು ಅಳತೆ ಮಾಡಿರುವುದಿಲ್ಲ. ವಸ್ತುಗಳನ್ನು ಸಂಗ್ರಹಿಸಿ ಮಾದರಿ ಸಂಗ್ರಹಿಸಲು ಎಷ್ಟು ಸಮಯ ಆಗಿರುತ್ತದೆ ಎಂದರೆ ಸಾಕ್ಷಿಯು ನೆನಪಿಲ್ಲ ಎಂದು ನುಡಿಯುತ್ತಾರೆ. ಆರೋಪಿಯನ್ನು ಖಚಿತಪಡಿಸಿಕೊಳ್ಳಲು ಚುನಾವಣಾ ಗುರುತಿನ ಚೀಟಿಯನ್ನು ಪಡೆದುಕೊಂಡಿರುತ್ತೇವೆ. ಈ ಬಗ್ಗೆ ಮಹಜರ್ ನಲ್ಲಿ ನಮೂದಿಸಿರುವುದಿಲ್ಲ. ಆರೋಪಿಯನ್ನು ದಸ್ತಗಿರಿ ಮಾಡಿದ ಬಗ್ಗೆ ಅವರ ಸಂಬಂಧಿಕರಿಗೆ ಹೇಳಿದ್ದೀರಾ ಎಂದರೆ ಸಾಕ್ಷಿಯು ಅವರ ಮನೆಯಲ್ಲಿ ಯಾರೂ ಇರಲಿಲ್ಲ ಎಂದು ನುಡಿಯುತ್ತಾರೆ. ಘಟನಾ ಸ್ಥಳದ ಚಕ್ಕುಬಂದಿ ನಮಗೆ ತಿಳಿದಿದೆ. ಪೂಃ ಖಾಲಿ ಜಾಗ, ಪಃಉಃದಃ ಜಮೀನು ಎಂದು ನಮುದಿಸಿರುತ್ತೇವೆ.

ದಿ: 17-04-2020 ರಂದು ಕ್ಯಾತಲಾಪುರ ಗ್ರಾಮದ ಆರೋಪಿ ಮನೆಗೆ ಹೋಗಿ ಯಾವುದೇ ದಾಳಿ ಮಾಡಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ವ್ಯಕ್ತಿಗಳು ಗುಂಪು ಸೇರಲು ಅವಕಾಶ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಗ್ರಾಮಕ್ಕೆ ಹೋಗಿಲ್ಲ ಮತ್ತು ಯಾವುದೇ ಪಂಚರನ್ನು ನೇಮಕ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ದಸ್ತಗಿರಿ ಮಾಡಿಲ್ಲ ಎಂದರೆ ಸರಿಯಲ್ಲ. ಆದರೂ ಸಹ ಆರೋಪಿಯ ವಿರುದ್ಧ ಇಲಾಖಾ ಅಂಕಿ ಅಂಶಕ್ಕೋಸ್ಕರ ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿಗೂ, ಮುದ್ದೆಮಾಲಿಗೂ, ಮನೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮನೆಯ ಮಾಲೀಕತ್ವ ಕೋರಿ ಯಾವುದೇ ಪತ್ರ ಬರೆದಿಲ್ಲ ಎಂದರೆ ಸರಿಯಲ್ಲ.ಯಾವುದೇ ಮುದ್ದೆ ಮಾಲುಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿಲ್ಲ ಮತ್ತು ಯಾವುದೇ ರಾಸಾಯನಿಕ ಪರೀಕ್ಷಾ ವರದಿ ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾ.ದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಅದೆ.

(ನಾಗೇಂದ್ರ)
ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ. ನ್ಯಾಯಾಲಯ ಬೇಲೂರು